ಎಫ್.ಡಿ.ಪಿ. ನಂಃ 01/2021
ಪಿ.ಡಬ್ಲ್ಯೂ-3 (ವರಧರಾಜ)

ದಿನಾಂಕ: 20-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಬಿ.ಕೆ.ಜೆ. 3ನೇ ಎದುರುದಾರ ಪರ ವಕೀಲರಿಂದಃ**

ನಾನು ಇಲೆಕ್ಟ್ರಿಕಲ್ ಕಾಂಟ್ರಾಕ್ಟರ ಕೆಲಸ ಮಾಡುತ್ತೇನೆ. ನಾನು ಧಾರವಾಡದಲ್ಲಿ ಮಾಲಮಡ್ಡಿ ಗೋಪಾಲಪುರದಲ್ಲಿ ವಾಸ ಇದ್ದೇನೆ. ನಾನು ಧಾರವಾಡದಲ್ಲಿ ಮಾಲಮಡ್ಡಿ ಗೋಪಾಲಪುರದಲ್ಲಿ ವಾಸ ಇದ್ದೇನೆ ಎಂದು ತೋರಿಸಲು ನನ್ನ ಆಧಾರ ಕಾರ್ಡನ್ನು ಹಾಜರ ಮಾಡಿರುತ್ತೇನೆ. ನಾನು ಜಾಬ್ ಓರಿಯಂಟೇಡ್ ಕೋರ್ಸ್ ಮಾಡಿರುತ್ತೇನೆ.

2. ಬಸವಂತಪ್ಪ ಇವರು ತಮಗೆ 04 ಜನ ಹೆಣ್ಣು ಮಕ್ಕಳು ಒಬ್ಬ ಗಂಡು ಮಗ ಇದ್ದಾರೆ ಎಂದು ನನಗೆ ಹೇಳಿದ್ದಾರೆ. ನಮ್ಮ ಅಪಾರ್ಟ್ಮೆಂಟನಲ್ಲಿ ವಾಸ ಇರುವ ಬಸವಂತಪ್ಪ ಇವರ ಮಗಳಾದ ಸರೋಜಿನಿ ಇವರ ಹೆಸರನ್ನು ಹೊರತುಪಡಿಸಿ ನನಗೆ ಬಸವಂತಪ್ಪ ಇವರ ಉಳಿದ 04 ಜನ ಮಕ್ಕಳು ಹೆಸರು ಗೊತ್ತಿಲ್ಲ.

3. ಸರೋಜಿನಿ ಇವರು ಬಸವಂತಪ್ಪ ಇವರ ಮೇಲೆ ದಾವೆ ಹೂಡಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಬಸವಂತಪ್ಪ ಇವರು ಎಷ್ಟು ಶಿಕ್ಷಣ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಬಸವಂತಪ್ಪ ಇವರಿಗೆ ಕಳ್ಳಿಗುದ್ದಿ ಮತ್ತು ಹುಲಕುಂದ ಗ್ರಾಮಗಳಲ್ಲಿ ಆಸ್ತಿ ಇರುತ್ತವೆ. ಗೋಕಾಕ ತಾಲೂಕಿನಲ್ಲಿ ಬಸವಂತಪ್ಪ ಇವರಿಗೆ ಆಸ್ತಿಗಳು ಇದ್ದವು, ಆದರೆ ಯಾವ ಊರಿನಲ್ಲಿ ಇದ್ದವು ಎಂದು ನನಗೆ ಗೊತ್ತಿಲ್ಲ.

4. 2019 ರಲ್ಲಿ ಬಸವಂತಪ್ಪ ಇವರು ತಮ್ಮ ಮೊಮ್ಮಗಳಿಗೆ ಮೃತ್ಯು ಪತ್ರ ಮಾಡುವುದು ಇದೆ ಎಂದು ನನ್ನ ಬಳಿ ಹೇಳಿದ್ದರು. 2019ರಲ್ಲಿ ಬಸವಂತಪ್ಪ ಮತ್ತು ಅವರ ಮಕ್ಕಳ ನಡುವೆ ನಡೆಯುತ್ತಿದ್ದ ಕೇಸಿನ ಬಗ್ಗೆ ನನಗೆ ಹೇಳಿಲ್ಲ. ಪಿ.ಡಬ್ಲ್ಯೂ-2 ರವರಿಗೂ ಸಹ 2019ರಲ್ಲಿ ಬಸವಂತಪ್ಪ ಇವರು ತಮ್ಮ ಮೊಮ್ಮಗಳಿಗೆ ಮೃತ್ಯು ಪತ್ರ ಮಾಡುವುದು ಇದೆ ಎಂದು ಹೇಳಿದ್ದರು. ಮೃತ್ಯು ಪತ್ರವನ್ನು ಯಾವ ವರ್ಷದಲ್ಲಿ ಮಾಡಿಸುತ್ತೇನೆ ಎಂದು ಬಸವಂತಪ್ಪ ಇವರು ನನಗೆ ಹೇಳಿಲ್ಲ.

5. 2019 ರಿಂದ ಬಸವಂತಪ್ಪ ಮರಣ ಹೊಂದುವವರೆಗು ಗೋಕಾಕಗೆ, ಹುಲಕುಂದಕ್ಕೆ ಸಾಕಷ್ಟು ಬಾರಿ ಬಂದು ಹೋಗಿದ್ದಾರೆ ಎಂದರೆ ಸರಿ. ಬಸವಂತಪ್ಪ ಇವರು ಅರ್ಜಿದಾರರ ಮನೆಯಲ್ಲಿಯೇ ಇರುತ್ತಿದ್ದರು ಎಂದು ಹೇಳಿ ಬಸವಂತಪ್ಪ ಇವರ ಆಧಾರ ಕಾರ್ಡ, ರೇಷನ ಕಾರ್ಡ, ಮತದಾರರ ಗುರುತಿನ ಪತ್ರ ಇವುಗಳನ್ನು ನೋಡಿಲ್ಲ. ಬಸವಂತಪ್ಪ ಇವರು ಎಲ್ಲಿಯವರೆಗು ವಿದ್ಯಾಭ್ಯಾಸ ಮಾಡಿದ್ದಾರೆ ಎಂದು ನಾನು ಕೇಳಿಲ್ಲ.

6. ದಿನಾಂಕ 23/10/2021 ರಂದು ಅಥವಾ 24/10/2021 ರಂದು ಬಸವಂತಪ್ಪ ಇವರು ಗಾಡಿ ಮಾಡಿಕೊಂಡು ಮೃತ್ಯು ಪತ್ರ ಮಾಡಿಸಲು ಹೋಗೋಣ ಎಂದು ನನಗು ಮತ್ತು ಪಿ.ಡಬ್ಲ್ಯೂ-2 ರವರಿಗೆ ಹೇಳಿರುತ್ತಾರೆ. ಆ ದಿವಸ ಬಸವಂತಪ್ಪ ಇವರ ಜೊತೆ ಸರೋಜಿನಿ ಮತ್ತು ಅನ್ನಪೂರ್ಣೇಶ್ವರಿ ಬಂದಿರಲಿಲ್ಲ. ಸರೋಜಿನಿ ಇವರಿಗೆ ಬಸವಂತಪ್ಪ ಇವರು ಗೋಕಾಕಗೆ

ಹೋಗೋಣ ಎಂದು ಹೇಳುತ್ತಿದ್ದಾರೆ, ನೀವು ಯಾರಾದರು ಬರುತ್ತಿರೋ ಇಲ್ಲವೊ ಎಂದು ನಾನು ಕೇಳಿಲ್ಲ. ಗೋಕಾಕಗೆ ಹೋಗಿ ಬಂದ ನಂತರವೂ ಸಹ ಸರೋಜಿನಿಯವರಿಗೆ ಗೋಕಾಕಗೆ ಹೋಗಿ ಬಂದ ಬಗ್ಗೆ ಹೇಳಿಲ್ಲ. ಬಸವಂತಪ್ಪ ಇವರು ಗೋಕಾಕಗೆ ಬರಲು ಒಂದು ಕಾರ ಮಾಡಿದ್ದರು, ನನಗೆ ಅದರ ನಂಬರ ಗೊತ್ತಿಲ್ಲ. ಸದರಿ ಕಾರ ಅಪಾರ್ಟ್ಮೆಂಟ ಬಳಿಯೇ ಬಂದಿತ್ತು. ಗಾಡಿ ತರಿಸಿರುವುದು, ಗೋಕಾಕಗೆ ಹೋಗುವುದು ಸರೋಜಿನಿಗೆ ಮಾಹಿತಿ ಇರಲಿಲ್ಲ. ಅನ್ನಪೂರ್ಣೇಶ್ವರಿಗೂ ಸಹ ಬಸವಂತಪ್ಪ ಇವರು ಗೋಕಾಕಗೆ ಹೋಗುತ್ತಿರುವ ಬಗ್ಗೆ ಮಾಹಿತಿ ಇರಲಿಲ್ಲ. ಇಂದು ಸರೋಜಿನಿಯವರು ನ್ಯಾಯಾಲಯಕ್ಕೆ ಬಂದಿರುತ್ತಾರೆ.

7. ಬಸವಂತಪ್ಪ ಇವರು ಗೋಕಾಕಗೆ ಬರುವಾಗ ಏನೇನು ಕಾಗದ ಪತ್ರ ತಂದಿದ್ದಾರೆ ಎಂದು ನನಗೆ ತೋರಿಸಿಲ್ಲ. ಮೃತ್ಯು ಪತ್ರದಲ್ಲಿ ಜಮೀನುಗಳ ಸರ್ವೆ ನಂಬರ, ಕ್ಷೇತ್ರ ಮತ್ತು ಆಕಾರ ಬರೆದಿಲ್ಲ. ಮೃತ್ಯು ಪತ್ರದಲ್ಲಿ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ಕೇಸಗಳ ನಂಬರ ಬರೆದಿಲ್ಲ. ಮೃತ್ಯು ಪತ್ರದಲ್ಲಿ 1/6 ಹಿಸ್ಸೆ ತಮ್ಮ ಮೊಮ್ಮಗಳಾದ ಅನ್ನಪೂರ್ಣೇಶ್ವರಿಗೆ ಹೋಗಬೇಕು ಎಂದು ಬರೆದಿದ್ದಾರೆ. ಮೃತ್ಯು ಪತ್ರದಲ್ಲಿ ಯಾವಾಗ ಆಸ್ತಿಗಳು ತಮ್ಮ ಮೊಮ್ಮಗಳಿಗೆ ಹೋಗಬೇಕು ಎಂದು ಬರೆಯಲಾಗಿದೆಯೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ.

8. ಮೃತ್ಯು ಪತ್ರವನ್ನು ಹಿರೇಮಠ ಇವರು ಬರೆದಿರುತ್ತಾರೆ, ನನಗೆ ಅವರ ಹೆಸರು ಗೊತ್ತಿಲ್ಲ. ಮೃತ್ಯು ಪತ್ರವನ್ನು ಹಿರೇಮಠ ಇವರೇ ಬೆರಳಚ್ಚು

ಮಾಡಿರುತ್ತಾರೆ. ನೇರವಾಗಿ ಮೃತ್ಯು ಪತ್ರ ಟೈಪ್ ಮಾಡಿರುತ್ತಾರೆ. ಹಿರೇಮಠ ಇವರು ತಾವು ಮೃತ್ಯು ಪತ್ರ ಬರೆದಿರುತ್ತೇನೆ ಎಂದು ಹೇಳಿ ಯಾವುದೇ ರಜಿಸ್ಟರನಲ್ಲಿ ಸಹಿ ಪಡೆದಿಲ್ಲ.

9. ನನಗು ಮತ್ತು ಬಸವಂತಪ್ಪ ಇವರಿಡಗು ವಯಸ್ಸಿನಲ್ಲಿ 30-35 ವರ್ಷ ಅಂತರ ಇದೆ. ಬಸವಂತಪ್ಪ ಇವರ ವಯಸ್ಸಿನವರು ನಮ್ಮ ಅಪಾರ್ಟ್ಮೆಂಟನಲ್ಲಿ ಬೇರೆ ಜನ ಇದ್ದಾರೆ ಎಂದರೆ ಸರಿ. ಮೃತ್ಯು ಪತ್ರದಲ್ಲಿ ಬಸವಂತಪ್ಪ ಇವರ ಆಧಾರ ಕಾರ್ಡ ನಂಬರ ಬರೆದಿದ್ದಾರೋ ಇಲ್ಲವೊ ಎಂದು ನನಗೆ ನೆನಪಿಲ್ಲ. ಮೃತ್ಯು ಪತ್ರದಲ್ಲಿ ಬಸವಂತಪ್ಪ ಇವರ ಮೋಬೈಲ ನಂಬರ ಬರೆದಿದ್ದಾರೋ ಇಲ್ಲವೊ ಎಂದು ನನಗೆ ನೆನಪಿಲ್ಲ.

10. ಮೊದಲನೆ ಬಾರಿ ಗೋಕಾಕಗೆ ಬೆಳಿಗ್ಗೆ 10.00 ಗಂಟೆ ಮುಂದೆ ಬಂದಿದ್ದೆವು. ಆ ದಿವಸ ಕಚೇರಿಗಳು ಚಾಲು ಇದ್ದವು ಎಂದರೆ ಸರಿ. ಮೃತ್ಯು ಪತ್ರ ತಯಾರ ಮಾಡಲು ಮಧ್ಯಾಹ್ನ 02.00 ಗಂಟೆ ಆಗಿರುತ್ತದೆ. ಉಪ-ನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ಸರ್ವರ್ ಸಮಸ್ಯೆ ಇದೆ ಎಂದು ಹಿರೇಮಠಯವರು ನಮಗೆ ಹೇಳಿರುತ್ತಾರೆ. ಮೃತ್ಯು ಪತ್ರ ಬರೆದ ದಿವಸ ಮೃತ್ಯು ಪತ್ರವನ್ನು ಹಿರೇಮಠ ಇವರ ಬಳಿಯೇ ಇಟ್ಟು ಹೋಗಿರುತ್ತೇವೆ. ಹಿರೇಮಠ ಇವರ ಬಳಿ ಮೃತ್ಯು ಪತ್ರ ಇಟ್ಟು ಹೋದ ಬಗ್ಗೆ ಪಿ.ಡಬ್ಲ್ಯೂ-2 ರವರಿಗೆ ಮಾಹಿತಿ ಇರುತ್ತದೆ. ಬಸವಂತಪ್ಪ ಇವರಿಗೆ ನಾನು, ನಿಮಗೆ ವಯಸ್ಸಾಗಿದೆ, ಮೃತ್ಯು ಪತ್ರವನ್ನು ಇಲ್ಲಿಯೇ ಅಂದರೆ ಧಾರವಾಡದಲ್ಲಿ ಮಾಡೋಣ ಎಂದು ನಾನು ಅವರಿಗೆ ಹೇಳಿಲ್ಲ.

ಎಫ್.ಡಿ.ಪಿ. ನಂಃ 01/2021
ಪಿ.ಡಬ್ಲ್ಯೂ-3 (ವರಧರಾಜ)

11. ನಾವು ದಿನಾಂಕ 29/10/2021 ರಂದು ಪುನಃ ಗೋಕಾಕಗೆ ಬಂದಿರುತ್ತೇವೆ. ಹಿರೇಮಠ ಇವರು ದಿನಾಂಕ 29/10/2021 ರಂದು ಗೋಕಾಕಗೆ ಬರಲು ತಿಳಿಸಿದ್ದರು. ಮೃತ್ಯು ಪತ್ರದಲ್ಲಿ ದಿನಾಂಕ 27/10/2020 ಎಂದು ನಮೂದಿಸಿದ್ದಾರೆ ಎಂದರೆ ತಪ್ಪಾಗಿ ನಮೂದಿಸಿದ್ದಾರೆ ಎಂದು ಹೇಳುತ್ತಾರೆ. ದಿನಾಂಕ ತಪ್ಪಾಗಿ ನಮೂದಿಸಲಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

12. ನಿಪಿ-2 ರಲ್ಲಿರುವ ಬಸವಂತಪ್ಪ ಇವರ ಫೋಟೋಗಳನ್ನು ಹೊರತುಪಡಿಸಿ ನಾನು ಅವರ ಬೇರೆ ಫೋಟೋಗಳನ್ನು ನೋಡಿಲ್ಲ. ನಿಪಿ-2 ರಲ್ಲಿ ಬಸವಂತಪ್ಪ ಇವರ ಸಹಿಗಳು ಬೇರೆ ಬೇರೆ ಇವೆ ಎಂದರೆ ಸರಿಯಲ್ಲ. ಸಹಿಯಲ್ಲಿ ಇರುವ ಅಕ್ಷರಗಳು ಬೇರೆ ಬೇರೆ ಇವೆ ಎಂದರೆ ಸಾಕ್ಷಿದಾರರು ಬಸವಂತಪ್ಪ ಇವರ ಸಹಿ ಎಂದು ಹೇಳುತ್ತಾರೆ. ನಿಪಿ-2 ರಲ್ಲಿರುವ ಸಹಿಗಳು ಬಸವಂತಪ್ಪ ಇವರ ಸಹಿಗಳಲ್ಲ ಹಾಗೂ ಫೋಟೋ ಬಸವಂತಪ್ಪ ಇವರ ಫೋಟೋ ಅಲ್ಲ ಎಂದರೆ ಸರಿಯಲ್ಲ.

13. ನಿಪಿ-2ರಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಿನಾಂಕ 27/10/2021 ರಂದು ಉಪ-ನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ಸರ್ವರ್ ಇರಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಸದರಿ ಮಾಹಿತಿಯನ್ನು ನಾನು ಹಿರೇಮಠ ಇವರ ಕಚೇರಿಯಲ್ಲಿ

ಕೊಟ್ಟಿರುತ್ತೇನೆ. ಆಗ ಪಿ.ಡಬ್ಲ್ಯೂ-2 ರವರು ಇದ್ದರು. ನಾನು ಸರೋಜಿನಿ ಇವರಿಗೆ ಬೇಕಾದವರು ಎಂದರೆ ಕಷ್ಟ ಸುಖಕ್ಕೆ ಬೇಕಾದವರು ಎಂದರೆ ಹೇಳುತ್ತಾರೆ. ದಿನಾಂಕ 27/10/2021 ಮತ್ತು 29/10/2021 ರಂದು ಸರೋಜಿನಿಯವರು ನನ್ನನ್ನು ಗೋಕಾಕಗೆ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ನನ್ನನ್ನು ಸರೋಜಿನಿಯವರೇ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ.

14. ನಾನು ಬಸವಂತಪ್ಪ ಇವರ ಮನೆತನದ ವ್ಯವಹಾರ ಮತ್ತು ಉಸ್ತುವಾರಿ ಮಾಡಿಲ್ಲ ಎಂದರೆ ಸರಿ. ದೊಡ್ಡ ದೊಡ್ಡ ನಗರಗಳಲ್ಲಿ ಒಬ್ಬರಿಗೊಬ್ಬರು ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ಬಸವಂತಪ್ಪ ಇವರಿಗೆ ಮೃತ್ಯು ಪತ್ರ ಮಾಡಿಕೊಡಬೇಕೆನ್ನುವ ವಿಚಾರ ಇರಲಿಲ್ಲ ಹಾಗೂ ಅವರ ಯಾವುದೇ ಮೃತ್ಯು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಬಸವಂತಪ್ಪ ಇವರು ದೈಹಿಕವಾಗಿ ಮತ್ತು ಮಾನಸಿಕವಾಗಿ ಸಧೃಡರಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಪಿ.ಡಬ್ಲ್ಯೂ-1, 2 ಮತ್ತು ಸರೋಜಿನಿಯವರು ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15. ಮೃತ್ಯು ಪತ್ರ ನೋಂದಣಿ ಮಾಡಿಸಲು ನಾವು ಬೆಳಿಗ್ಗೆ ಬಂದಿದ್ದೆವು, ಮಧ್ಯಾಹ್ನ ಹೊತ್ತಿಗೆ ಕೆಲಸ ಮುಗಿದಿರುತ್ತದೆ, ಸಂಜೆ ಹೊತ್ತಿಗೆ ನಾವು ಊರಿಗೆ ತಲುಪಿದ್ದೆವು. ದಿನಾಂಕ 29/10/2021 ರಂದು ನಾವು ಗೋಕಾಕಗೆ ಬಂದಿರುತ್ತೇವೆ, ಮಧ್ಯಾಹ್ನ ಹೊತ್ತಿಗೆ ಕೆಲಸ ಮುಗಿದಿರುತ್ತದೆ, ಸಂಜೆ ಹೊತ್ತಿಗೆ

ನಾವು ಊರಿಗೆ ತಲುಪಿದ್ದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳೆಲ್ಲವೂ ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ಬಸವಂತಪ್ಪ ಇವರಿಗೆ ವಯಸ್ಸಾಗಿದ್ದರು ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಎಂದೂ ಬಸವಂತಪ್ಪ ಇವರು ಧಾರವಾಡದಲ್ಲಿ ವಾಸ ಇರುತ್ತಿರಲಿಲ್ಲ ಎಂದರೆ ಸರಿಯಲ್ಲ. ಬಸವಂತಪ್ಪ ಹಾಗೂ ಅವರ ಮಗಳಿಗು ಸಂಬಂಧ ಸರಿ ಇರದೇ ಇದ್ದುದ್ದರಿಂದ ಬಸವಂತಪ್ಪ ಇವರು ಯಾವತ್ತೂ ಧಾರವಾಡದಲ್ಲಿ ವಾಸ ಇರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ